ಕೇಳಿಬಂದಿತು.

'ನೇಣ್‌ಕಟ್‌ಬ್ಯಾಕು – ಮರದ್‌ಕೊಂಬೇಗೆ ಸಾಯಾವರ್ರೂ!... ಇನ್ನೊಂದು ಪಟ ಕಳ್‌ತನದ್ ಏಚ್‌ಣೆ ಮಾಡದ್ದಂಗೆ'

'ತಲೆ ಕೆಳಾಕೆ ನೇತಾಕಿ ಮೆಣಸಿನ್‌ಕಾಯಿ ಹೊಗೆ ಕೊಡ್‌ಬ್ಯಾಕು. ಲಾಕಪ್‌ನಾಗೆ ಪೊಲೀಸ್‌ನೋರು ಮಾಡಾಹಂಗೆ.'

'ಕೊಚ್‌ಬ್ಯಾಕು– ಅಲಸಿನ್‌ಕಾಯಿ ಕೊಚ್‌ದಂಗೆ.'

'ಕೈಕಡೀಬ್ಯಾಕು, ಹಿಂದೆಲ್ಲ ಮಾಡ್ತಾ ಇದ್ರಂತಲ್ಲ ಹಂಗೆ.'

'ಈಗ್ಲೂ ಮಾಡ್ತಾರಂತೆ ಯಾವ್ ಯಾವ್‌ದೋ ದೇಸ್‌ದಾಗೆ. ಹಂಗೇ ಮಾಡ್‌ಬ್ಯಾಕು. ಕಳ್ಳತನ ಮಾಡ್ತಾನಂತೆ ಕಳ್ಳತನಾನ. ಅದೂ ನಮ್ಮೂರಾಗೆ. ಗೋಕುಲ್‌ದಾಗೆ.'

'ಹಂಗೂ ಅವರ್ ಇವರ್‌ವಲ್ಲ ಕಣಪ್ಪ, ಸಾಕ್ಷಾತ್ ದ್ಯಾವ್ರದ್ದು. ನಮ್ಮಪ್ಪ ಬೆಣ್ಣೆ ದ್ಯಾವ್ರು, ಕಿಷ್ಣಪರ್‌ಮಾತ್ಮಂದು.'

'ಸಾವ್‌ಕಾರ್ರೆ, ಒಸಿ ಅವಂಗೆ ಸರ್‍ಯಾಗ್ ಏಗ್ತವಾಗ್ ಮಾಡಿ. ಈಗ ಮಾಡಿದ್ದು ಏನೂ ಸಾಲ್ದು.'

'ಓಗ್ಲಿ ಬುಡ್ರಪ್ಪ, ಏನೋ ತೆಪ್ ಮಾಡ್ಬುಟ್ಟ, ಈಗೇನ್ ಒಸಿ ಆಗೈತಾ ಅವಂಗೆ?'

'ಆ! ಏನಂದೇ?... ಆಗೈತಾ? ಆಗೈತಾ? ಬುಡ್ರಪ್ಪ ಅಂದೀಯಾ ನೀನೂ ಸರ್‍ಯಾದ್ ಮನ್ಸಬುಡು. ಅವ್ನು ಏನಾಗ್‌ಬ್ಯಾಕು ನಿಂಗೆ? ಚಿಕ್ಕಪ್ಪನ್‌ಮಗ್ನಾ, ದೊಡ್ಡಪ್ಪನ್‌ಮಗ್ನೋ? ನಿಂಗೇನಾದರೂ ಪಾಲ್‌ಕೊಟ್ಟಾನೇನು ಕಳ್‌ಮಾಲ್ನಾ ಸರ್ ಸರಿ ನೀನಾಡಾದು ಒಸಿ ಬಾಯ್ ಮುಚ್ಕೊಂಡ್ ಸುಮ್ಕೆ ಇರ್‌ಬ್ಯಾಡ್ವ? ಬುಡಬೇಕಂತೆ, ವಾ, ಬೇಸ್ ಮಾತು, ಬಾರಿ ದೊಡ್ ಮನ್ಸ. ಬಂದ ಪಂಚಾಯ್ತಿ ಸುಬಗಾಯ್ತಿಗೆ. ಇನ್ನೂ ನಾಕು ಚೆನ್ನಾಗ್ ಆಕಿ, ಅಂಗ್ ಮಾಡಿ ಇಂಗ್ ಮಾಡಿ, ಅನ್ನೋದ್ ಬುಟ್ಟು, ಅದೆಲ್ಲ ಆಗಾಕಿಲ್ಲ, ಚೆನ್ನಾಗ್ ಬುದ್ಧಿಕಲ್ಸ್‌ಲೇಬ್ಯಾಕು ಆ ನನ್‌ಮಗಂಗೆ. ಇನ್ನೂ ಏಟೋ ಜನ ಇಲ್ಗೆ ಬಂದಿಲ್ಲ. ಅವರ್ಗೆಲ್ಲ ತಿಳೀಬ್ಯಾಡ್ವ ಕಾಣ್‌ಬ್ಯಾಡ್ವಾ. ಇವನ್ನ ಸಿಗ್‌ದು ತ್ವಾರ್ಣಕಟ್ಟಿ ಮೆರ್‌ವಣ್ಗೆ ಮಾಡ್‌ಬ್ಯಾಕು ಅಳ್ಳಿ ಬೀದ್‌ಬೀದ್ಯಾಗೆಲ್ಲ...'

'ಔದು ಔದು! ಬಾಳ ಚಂದಾಗಿರ್ತೈತೆ.'

"ಆ! ಆ!'

'ಮೆರ್‌ವಣ್ಗೆ!'

'ಮೆರ್‌ವಣ್ಗೆ!'

ಜನರು ಕೂಗಿಕೊಳ್ಳುತ್ತಿದ್ದರು. ದೇವಸ್ಥಾನದ ಹಿಂದಿದ್ದ ಕತ್ತೆಗಳಲ್ಲೊಂದು ಕಿರಿಚಿಕೊಂಡಿತು.

'ಆ! ಆ! ಆಗಾ! ಕತ್ತೆಮ್ಯಾಗೆ!'

'ಹ್ಞಾ, ಕತ್ತೆಮ್ಯಾಲೆ ಮೆರ್‌ವಣ್ಗೆ!'

'ಹ್ಞಾ ಹ್ಞಾ, ಕತ್ತೆಮ್ಯಾಲೆ!'

'ಕತ್ತೆಮ್ಯಾಗೆ!'

'ಔದು ಔದು, ಕತ್ತೇ!'

'ಕತ್ತೆ, ಕತ್ತೇ!'

'ಔದುಔದು, ಕತ್ತೇ!'

'ತಲೆಬೋಳಿಸಿ!'

'ಊ, ಕಳ್ಳನನ್ನ ಮಗನ್ ತಲೆಬ್ವಾಳ್ಸಿ!'